(*b*) The surveying, preparation of plans and estimates for the 19 works is programmed under a Master Plan covering a period of 5 years.

(*c*) No.

(*d*) Does not arise in view of reply to clause (*c*).

ಶ್ರೀ ಮುದ್ದುರಾಮಯ್ಯ.—ತುಮಕೂರು ಮತ್ತು ಕೋಲಾರ ಜಿಲ್ಲೆಗಳನ್ನು ಬಹಳ ಅಭಾವ ಪ್ರದೇಶಗಳೆಂದು ಪರಿಗಣಿಸಿಲ್ಲವೇ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಹೇಳುತ್ತಿರುವುದು ಅಲ್ಲಿರತಕ್ಕ ಎಲ್ಲಾ ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ಏಕಕಾಲಕ್ಕೇ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು.

ಶ್ರೀ ಮುದ್ದುರಾಮಯ್ಯ.—ಅಲ್ಲಿ ಇನ್ನೊಂದು ಸಬ್‌ಡಿವಿಜನ್ನನ್ನು ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಲೆ ಅಲ್ಲಿರತಕ್ಕ ಸಬ್‌ಡಿವಿಜನ್ನಿನಿಂದಲೇ ಅಲ್ಲಿಯ ಕೆಲಸಗಳನ್ನ ಮಾಡುವುದಕ್ಕೆ ಸಾಧ್ಯವಿದೆ.

ಶ್ರೀ ಮುದ್ದುರಾಮಯ್ಯ.—ಹಾಗಾದರೆ ಇಲ್ಲಿ ಏಕೆ ಈ 19 ಕೆಲಸಗಳ ಸರ್ವೆ ಮತ್ತು ಪ್ಲಾನ್ ವಗೈರೆ ಮಾಡುವುದಕ್ಕೆ 5 ವರ್ಷಗಳು ಬೇಕೆಂದು ಹೇಳಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಹೇಳಿರತಕ್ಕದ್ದು ಎಲ್ಲಾ ಕೆರೆಗಳ ಕೆಲಸವನ್ನೂ ಒಂದು ವರ್ಷದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ತಿಳಿಸಿದೆ.

Lift Irrigation Project at Iggalur

231. **Sri S. KARIAPPA** (Kanakapura).—

Will the Minister of State for Major Irrigation be pleased to state :—

(*a*) whether an estimate for Lift Irrigation Project at Iggalur, Channapatna Taluk has been prepared and sent for sanction to the Government of India ;

(*b*) if so, the estimated cost of the project ;

(*c*) the estimated extent of land that would come under irrigation ;

(*d*) the stage at which the project stands at present :

(*e*) the year in which the project was prepared ?

Sri H. N. NANJE GOWDA (Minister of State for Major Irrigation).—

(*a*) Yes. Iggalur Project provides both flow and Lift Irrigation.

(*b*) Rs. 132 lakhs.

(*c*) 8,000 Acres. (3,500 acres under flow canal; 4,500 acres by Lift).

(*d*) The project is pending clearance with the Central Water and Power Commission.

(*e*) During 1971.

ಶ್ರೀ ಎಸ್. ಕರಿಯಪ್ಪ.—ಈ ಇಗ್ಗಲೂರು ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್‌ನ್ನು ಸರ್ಕಾರ ಮಂಜೂರು ಮಾಡಿದ್ದು ಯಾವಾಗ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಸಿ. ಡಬ್ಲ್ಯು. ಪಿ. ಸಿ.ಗೆ ಹೋಗಿದೆ ಇನ್ನೂ ಮಂಜೂರಾಗಿಲ್ಲ.

ಶ್ರೀ ಎಸ್. ಕರಿಯಪ್ಪ.—ದಯವಿಟ್ಟು ಪೇಪರನ್ನು ಇನ್ನೊಮ್ಮೆ ನೋಡಿ ಹೇಳಬೇಕು. ಇದು ಕಳೆದ 2-3 ತಿಂಗಳ ಹಿಂದೆ ಮಂಜೂರಾಗಿದೆ ಎಂದು ಕೇಳಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಇನ್ನೂ ಮಂಜೂರು ಆಗಿಲ್ಲ, ನನ್ನ ಬಳಿ ಇರತಕ್ಕ ಕಾಗದ ಪತ್ರಗಳಲ್ಲಿ ಇರುವುದರ ಆಧಾರದ ಮೇಲೆ ಹೇಳುತ್ತಿದ್ದೇನೆ. Advisory Committee on the multipurpose Irrigation and Food Control Project ಅದರ ಕಡೆಗೆ ಇದನ್ನು ತಾರೀಖು 2-6-1972ರಲ್ಲಿ ಕಳುಹಿಸಲಾಗಿದೆ. ಅವರು ಪರಿಶೀಲನೆ ಮಾಡಿದ ನಂತರ ಅದನ್ನು ಕ್ಲಿಯರ್ ಮಾಡಲಾಗುವುದು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ತಾವು ಆ ಸಿ. ಡಬ್ಲ್ಯು. ಪಿ. ಸಿ.ಗೆ ಇದನ್ನು ಕಳುಹಿಸಿದ್ದು ಯಾವಾಗ ? ಅವರಿಂದ ಒತ್ತಾಯ ಮಾಡಿ ಅದನ್ನು ಜಾಗ್ರತೆ ತರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೆ ನಾವು 1971ನೇ ಜೂನ್ ತಿಂಗಳಲ್ಲಿ ಕಳುಹಿಸಿದೆವು. ಅವರಿಂದ ನಮಗೆ 1971ನೇ ಅಕ್ಟೋಬರಿನಲ್ಲಿ ಉತ್ತರ ಬಂತು. ಫೈನರ್ ಕ್ಲಿಯರೆನ್ಸಿಗೆ ನಾವು ಮತ್ತೆ ತಾ. 22-2-1972ಕ್ಕೆ ಬರೆದಿದ್ದೇವೆ. ಅವರಿಂದ ಇನ್ನೂ ಉತ್ತರ ಬಂದಿಲ್ಲ. ಬಂದಕೂಡಲೆ ಅದನ್ನು ಎಕ್ಸ್‌ಪಿಡೈಟ್ ಮಾಡಲಾಗುವುದು.

Borewells in Imangala Hobli

315. Sri C. R. MOHAMED SAIFUDDIN (Chitradurga).—

Will the Minister for Public Works aud Electricity be pleased to state :—

(*a*) the number of borewells that have been dug in Imangala Hobli, Hiriyur Taluk ;

(*b*) the number of them fitted with hand pumps ;

(*c*) the number of pumps that are in working condition ;

(*d*) the amount spent on these borewells so far and under what scheme ;

(*e*) whether any complaint regarding defective working of these hand pumps have been received, If so, the steps taken to rectify the defects ?

Sri H. M. CHANNABASAPPA (Minister for Public Works and Electricity).—

(*a*) 104 Borewells.

(*b*) 93 Borewells.

(*c*) 80 Borewells.

(*d*) 1,59,100 to end of January 1973 under 32 R. D. (UNICEF aided Scheme).